# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 100/2024

**ಸಾಕ್ಷಿಯನ್ನು ದಿಃ 28.07.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಜಯಂತ್ ಕುಮಾರ್ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 2 |
| ತಂದೆಯ ಹೆಸರು | ರಮೇಶ್ | | |
| ವಯಸ್ಸು | 26 ವರ್ಷ | | |
| ಕೆಲಸ | ಕೋರಿಯರ್ ನೌಕರ | | |
| ವಾಸಸ್ಥಳ | H.D.ಕೋಟೆ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–1 ನನ್ನ ಅಕ್ಕ. ಚಾಸಾ–2 ನನ್ನ ಚಿಕ್ಕಮ್ಮ. ಚಾಸಾ–3 ನನ್ನ ಮಾವ. ಚಾಸಾ–5 ಮತ್ತು 6 ನನ್ನ ಸ್ನೇಹಿತರು. ಈ ಪ್ರಕರಣದ ಬಗ್ಗೆ ನಾನು ಪೋಲಿಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ.

ದಿಃ 12.12.2023 ರಂದು ಬೆಳಿಗ್ಗೆ 7.30 ಗಂಟೆಗೆ ಚಾಸಾ–1 ರವರು ನನಗೆ ಕರೆ ಮಾಡಿ, ಅದೇ ದಿನ ಬೆಳಿಗ್ಗೆ 6–30 ಗಂಟೆಗೆ ಅವರು ಮನೆಯಲ್ಲಿ ಪಾತ್ರೆ ತೊಳಿಯುತ್ತಿದ್ದಾಗ, 1ನೇ ಆರೋಪಿ ಅದೇ ಸಮಯಕ್ಕೆ ನೀರು ಹಿಡಿದುಕೊಳ್ಳಲು ಬಂದಿದ್ದು, 2 ನಿಮಿಷ ಕಾಯಿರಿ ಎಂದು ಚಾಸಾ–1 ರವರು ಹೇಳಿದಾಗ, 1ನೇ ಆರೋಪಿ ಯು ಚಾಸಾ–1 ರವರಿಗೆ ಲೋಫರ್ ಮುಂಡೆ ನಾನು ನಿನ್ನನ್ನು ಕಾಯಬೇಕಾ, ನಿಮ್ಮಮ್ಮನ ಕೇಯ್ಯ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿನ್ನನ್ನು ಸಾಯಿಸುತ್ತೇನೆ, ನಿನ್ನ ಆಟ ಜಾಸ್ತಿಯಾಗಿದೆ ಎಂದು ಹೇಳಿ 1ನೇ ಆರೋಪಿ ಚಾಸಾ–1 ರವರ ಕುತ್ತಿಗೆಯನ್ನು ಹಿಡಿದು ತಾಳಿಯನ್ನು ಕಿತ್ತು ಬಿಸಾಕಿದರು. ಚಾಸಾ–1 ರವರ ಸೊಂಟಕ್ಕೆ ಕಾಲಿನಿಂದ ಒದ್ದು, ಹಿಂದಲೆಯನ್ನು ಹಿಡಿದುಕೊಂಡು ಆಚೆಗೆ ಬಿಸಾಡಲು ಹೊಡೆದರು. ಆಗ 2ನೇ ಆರೋಪಿ ಬಂದು ಚಾಸಾ–1 ರವರ ಕೈಗಳನ್ನು ಬಿಗಿಯಾಗಿ ಹಿಡಿದು ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಆಗ ಚಾಸಾ–1 ರವರ ಮಗು ಮತ್ತು ಅಕ್ಕ–ಪಕ್ಕದವರು ಬಂದು ಜಗಳ ಬಿಡಿಸಿದರು

ಎಂಬುದಾಗಿ ಚಾಸಾ-1 ರವರು ನನಗೆ ಹೇಳಿದರು. ನಂತರ ಚಾಸಾ-1 ರವರು ಚಾಸಾ-3 ರವರ ಜೊತೆ ಹೋಗಿ ಆಸ್ಪತ್ರೆಗೆ ದಾಖಲಾದರು. ನನ್ನನ್ನು ಕರೆ ಮಾಡಿ ಬರುವಂತೆ ಕರೆದರು. ನಾನು ಆಸ್ಪತ್ರೆಗೆ ಹೋಗಿ ಚಾಸಾ-1 ರವರನ್ನು ವಿಚಾರಿಸಿ ನನ್ನ ಕೆಲಸಕ್ಕೆ ಹೋದೆ. ಊರಿಗೆ ಬಂದ ನಂತರ ಪ್ರಕರಣ ದಾಖಲಾದ ಬಗ್ಗೆ ಗೊತ್ತಾಯಿತು. ಈ ಬಗ್ಗೆ ದಿಃ 18.12.2023 ರಂದು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಪಿ ಪರ ಶ್ರೀ. ಆರ್ ಕೆ.ಎಂ ವಕೀಲರಿಂದಃ**

ಕಾಲಾವಕಾಶ ಕೋರಿದ್ದು,ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.